60101

ಮೊದಲನೆಯ ಚತುರ್ಮಾಸ ಬಿ.ಎ ಪರೀಕ್ಷೆಗಳು – ಮಾರ್ಚ್/ಏಪ್ರಿಲ್ 2022

ಸ್ಕೀಮ್: ಸಿಬಿಸಿಎಸ್

001

ಕನ್ನಡಭಾಷೆ

ಕಲಾ ಸೌರಭ – ೧

ಸಮಯ: 3 ಗಂಟೆ ಗರಿಷ್ಠ ಅಂಕ: 80

ಕಾವ್ಯ ಭಾಗ (50 ಅಂಕಗಳು)

1.ಅ. ಒಂದು ಪದ್ಯದ ಭಾವವನ್ನು ಸಂದರ್ಭಸಹಿತ ವಿವರಿಸಿ. **1x5=5**

೧. ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈ ಹಿಡಿದು ನಡಸೆನ್ನನು
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ,
ಕೈ ಹಿಡಿದು ನಡಸೆನ್ನನು
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳಿನೊಡನೆಯೆ – ಸಾಕು ನನಗೊಂದು ಹೆಜ್ಜೆ.

೨. ಹೊಸನೆತ್ತರುಕುಕ್ಕಿ ಆರಿಹೋಗುವ ಮುನ್ನ,
ಹರಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹ ಸಾಹಸದಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು!

ಆ. ಒಂದು ವಾಕ್ಯದಲ್ಲಿ ಉತ್ತರಿಸಿ. **5x1=5**

೧. ದಾಶರಥಿ ಎಂದು ಯಾರನ್ನು ಕರೆಯುತ್ತಾರೆ?
೨. ಮುದುಕಿ ರಂಗವಲ್ಲಿ ಹಾಕುತ್ತಿದ್ದ ಸ್ಥಳ ಯಾವುದು?
೩. ಸಿರಿಗೌರಿಯಂತೆ ಬಂದವರು ಯಾರು?
೪. ಸಿದ್ದಯ್ಯನ ಸಾಕುಮಗಳು ಯಾರು?
೫. ಕಥೆಗಾರ್ತಿ ವೈದೇಹಿ ಅವರ ನಿಜನಾಮ ಯಾವುದು?

2. ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ **4x2½=10**

೧. ನೀನಾರಿಸಲ್ ಪೋದಡದು ಕೇಳ್ ನಿನ್ನನೊಳಕೊಳ್ಳುವುದೆ ದಿಟಂ!
೨. ದೇವಗೊಲಿದು ಕೈಯ ಮುಗಿಯುವರಿವೆ ಇಲ್ಲವು!
೩. ಎದೆತುಂಬ ಮೊರೆಯುತಿವೆ ಹತ್ತುದಿಕ್ಕಿನ ಗಾಳಿ!
೪. ಮುಳಿಸು ಮಾವನ ಮೇಲೆ; ಮಗಳೇನ ಮಾಡಿದಳು.
೫. ಕೋಟೆಗೋಡಿಗೆ ನಮ್ಮ ಹೆಣಗಳೇ ಮೆಟ್ಟಿಲು.
೬. ಎಲ್ಲ ನದಿಗಳ ನೆನೆದು ಮಲಗು ದೇವ!

ಪು.ತಿ.ನೋ

MEGC LIBRARY

3.ಅ. ಎರಡು ವಿಷಯಗಳಿಗೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ. 2x4=8

೧. 'ಜೀವನ ಕಷ್ಟಸುಖಗಳ ಸಮ್ಮಿಲನ' ಚರ್ಚಿಸಿ.

೨. ಶ್ರಾವಣ ಮಾಸದ ಮಹತ್ವ ಕುರಿತು ಬರೆಯಿರಿ.

೩. ದೇವರ ಬಗ್ಗೆ ನಿಮ್ಮ ಅನಿಸಿಕೆಗಳನ್ನು ತಿಳಿಸಿ.

೪. ಕೋಮುಸೌಹಾರ್ದತೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

ಆ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. 4x½=2

ಅಡಿ, ಜಿಪ್ಪೆ, ಸೋಜಿಗ, ಮೂಡಣ, ಎಡರು, ಪರುಸೆ, ನಂಜು, ಅಡವಿ.

4. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. ನಿಜಭಕ್ತಿಯ ಸ್ವರೂಪ 'ರಂಗವಲ್ಲಿ' ಕವನದಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

೨. ರಾವಣ ಮತ್ತು ಚಂದ್ರನಖಿಯರ ನಡುವೆ ನಡೆದ ಸಂಭಾಷಣೆಯ ಮಹತ್ವವನ್ನು ಕುರಿತು ಬರೆಯಿರಿ.

5. ಎರಡು ಪ್ರಶ್ನೆಗಳಿಗೆ ಉತ್ತರಿಸಿ: 2x5=10

೧. 'ಮಬ್ಬಿನಿಂದ ಮಬ್ಬಿಗೆ' ಕವಿತೆಯಲ್ಲಿ ಚಿತ್ರಿತವಾಗಿರುವ ಹುಟ್ಟುಸಾವಿನ ಪಯಣವನ್ನು ಕುರಿತು ಬರೆಯಿರಿ.

೨. ದೇವರ ಹೆಸರಿನಲ್ಲಿ ನಡೆಯುವ ಮೌಢ್ಯವನ್ನು 'ಕತ್ತೆ ಮತ್ತು ಧರ್ಮ' ಕವಿತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

೩. 'ಬಳೆಗಾರನ ಹಾಡು' ಕವಿತೆಯ ಆಶಯವನ್ನು ಕುರಿತು ಬರೆಯಿರಿ.

೪. ಪುರುಷನ ನಾಟಕೀಯ ವ್ಯಕ್ತಿತ್ವ 'ಶಿವನ ಮೀಸುವ ಹಾಡು' ಕವನದಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ? ವಿಶದಪಡಿಸಿ.

ಕಥನ ಭಾಗ (30 ಅಂಕಗಳು)

6. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. ಕೌಟುಂಬಿಕ ವಿಘಟನೆಯ ಅನಾಹುತಗಳು 'ಮೊಸರಿನ ಮಂಗಮ್ಮ' ಕತೆಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

೨. ಮಲ್ಲುವಿನ ದುರಂತದ ಬದುಕು 'ಕಲ್ಲಿನ ಕೊಳಲು' ಕತೆಯಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ? ಚರ್ಚಿಸಿ.

7. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. 'ದೇವರ ಹೆಣ' ಕತೆಯಲ್ಲಿ ಅಭಿವ್ಯಕ್ತಿಗೊಂಡಿರುವ ಹಸಿವಿನ ತೀವ್ರತೆಯನ್ನು ಕುರಿತು ಬರೆಯಿರಿ.

೨. ರಾಣಿಯ ಮಾನಸಿಕ ತೊಳಲಾಟ ಮತ್ತು ಚೆನ್ನನ ಸಂತೃಪ್ತ ಜೀವನ 'ತುಂಬಿದಕೊಡ' ಕತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

8. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: 2x5=10

೧. ಮೊಸರಿನ ಮಂಗಮ್ಮನ ಜೀವನ ಪ್ರೀತಿಯನ್ನು ಕತೆಯ ಹಿನ್ನೆಲೆಯಲ್ಲಿ ವಿವರಿಸಿ.

೨. ಅಜ್ಜಯ್ಯನ ವ್ಯಕ್ತಿತ್ವವನ್ನು ವಿವರಿಸಿ.

೩. ತೊಣ್ಣೆಯ ಬಗೆಗೆ ಇನ್ಸ್‌ಪೆಕ್ಟರ್‌ಗೆ ಭಯವಾಗಲು ಕಾರಣವೇನು? ತಿಳಿಸಿ.

೪. 'ತುಂಬಿದಕೊಡ' ಕತೆಯ ಮಹತ್ವವೇನು?

** *** **

MFGC LIBRARY